# ಬಾರದ ಲೋಕಕ್ಕೆ ಹಾರಿದ 'ಆಪ್ತಮಿತ್ರ'

ಹಾರೋಗೊಳಿಗೆ ಶಿವಮೊಗ್ಗ ಜಿಲ್ಲೆ, ತೀರ್ಥಹಳ್ಳಿ ತಾಲ್ಲೂಕಿನ ಪುಟ್ಟ ಗ್ರಾಮ. ಈ ಊರಿಗೆ ಕಳೆದೆರಡು ವರ್ಷಗಳ ಹಿಂದೆ ವಿಶೇಷ ಅತಿಥಿಯ ಆಗಮನವಾಗಿತ್ತು. ಆ ಅತಿಥಿಯೇ ಚಿತ್ತಾಕರ್ಷಕ ಪಕ್ಷಿ ನವಿಲು. ಪ್ರಾರಂಭದಲ್ಲಿ ಊರ ಅತಿಥಿಯಾಗಿದ್ದ ಈ ಪಕ್ಷಿ ದಿನಗಳೆದಂತೆ 'ಜನಸ್ನೇಹಿ'ಯಾಗಿ ಪ್ರತಿ ಮನೆಯ ಅತಿಥಿಯಾಯಿತು. ಪುಟ್ಟ ಮಕ್ಕಳಿಂದ ಹಿಡಿದು ಹಿರಿಯರವರೆಗೆ ಎಲ್ಲರ ಆಪ್ತಮಿತ್ರನಾಯಿತು.

ನವಿಲು ಆಹಾರಕ್ಕಾಗಿ ಅಲೆದಾಡುವ ಅವಶ್ಯಕತೆಯೇ ಬರಲಿಲ್ಲ. ಯಾರದ್ದೇ ಮನೆಯ ಮುಂದೆ ಹಾರಿ ಹೋಗಿ ಕುಳಿತರೆ ಸಾಕು ಮನೆಯವರು ಅದಕ್ಕೆ ಆಹಾರ ನೀಡುತ್ತಿದ್ದರು. ಜುಲೈ 31ರಂದು ಆಕಸ್ಮಿಕವಾಗಿ ವಿದ್ಯುತ್ ತಂತಿಗೆ ಸಿಲುಕಿದ್ದರಿಂದ ನಮ್ಮೂರ 'ಆಪ್ತಮಿತ್ರ'ನ ಪ್ರಾಣಪಕ್ಷಿ ಹಾರಿ ಹೋಯಿತು. ಊರಿನವರು ನವಿಲಿಗೆ ಅರಿಶಿಣ–ಕುಂಕುಮ ಹಚ್ಚಿ, ಪುಷ್ಪನಮನ ಸಲ್ಲಿಸಿದರು. ಅರಣ್ಯ ಇಲಾಖೆಯವರು ಮಹಜರು ಮಾಡಿದರು. ನವಿಲಿಗೆ ಗೌರವದಿಂದ ಸಂಸ್ಕಾರ ಮಾಡಿದರು.

–ಸಂತೋಷ್ ಎಲಿಗಾರ್, ಶಿವಮೊಗ್ಗ





# ಕಲಾತ್ಮಕ ಮರದ ಮಂಟಪ!

ಮರದ ಕೆತ್ತನೆ ಹಾಗೂ ಕುಸುರಿ ಕೆಲಸದ ಕಲೆಯನ್ನು ಬಿಂಬಿಸುವ ಸುಮಾರು ನಾಲ್ಕು ಮೀಟರ್ ಎತ್ತರ ನಾಲ್ಕು ಅಗಲವಿರುವ ಈ ಮಂಟಪ ದಕ್ಷಿಣಕನ್ನಡ ಜಿಲ್ಲೆಯ ಸುರತ್ಕಲ್ ಬೀಚ್ ಸನಿಹದ ಶ್ರೀ ಸದಾಶಿವ ಮಹಾಗಣಪತಿ ದೇವಸ್ಥಾನದಲ್ಲಿದೆ.

ಸಾಮಾನ್ಯ ದಿನಗಳಲ್ಲಿ ಕಾಣಸಿಗದ ಈ ಅಪರೂಪದ ಆಕರ್ಷಕ ಮಂಟಪವನ್ನು ತುಳುವರ ಆಟಿ ತಿಂಗಳಲ್ಲಿ (ಜುಲೈ–ಆಗಸ್ಟ್) ಹೊರ ಆವರಣದಲ್ಲಿರಿಸಿ ಶುಚಿಗೊಳಿಸಲಾಗುತ್ತದೆ. ಅಂಥ ಸಂದರ್ಭದಲ್ಲೊಮ್ಮೆ ಮಂದಿರಕ್ಕೆ ಭೇಟಿನೀಡುವ ಅವಕಾಶದಲ್ಲಿ ಕಾಣಸಿಕ್ಕಾಗ ಅಚ್ಚರಿಯಿಂದ ಕ್ಲಿಕ್ಕಿಸಿದೆ! ಮಂಟಪದೊಳಗೆ ಪೆಟ್ಟಿಗೆಯಾಕಾರದ ಪೀಠವನ್ನು ಅಳವಡಿಸಲಾಗಿದ್ದು, ಅದರ ಮುಂಭಾಗದ ಬಾಗಿಲಿಗೆ ಬಸವ ಶಿಲ್ಪಾಕಾರ ನೀಡಿ ಕಲಾತ್ಮಕ ರೂಪ ನೀಡಲಾಗಿದೆ. ಹೊರಾವರಣದಲ್ಲಿ ಪಕ್ಷಿ, ಪ್ರಾಣಿ, ದೇವತಾ ಕೆತ್ತನೆಗಳಿವೆ.

–ರಮಣ್ ಶೆಟ್ಟಿ ರೆಂಜಾಳ್, ಮುಂಬಯಿ

# ಬುತ್ತಿ ಪೂಜೆ

ಗದಗ ನಗರದಲ್ಲಿರುವ ಜೋಡಿ ಹನುಮಪ್ಪ ದೇವಸ್ಥಾನದಲ್ಲಿ ಬುತ್ತಿ ಪೂಜೆಯನ್ನು ಮಾಡುತ್ತಾರೆ. ಆಂಜನೇಯನ ಎರಡು ಮೂರ್ತಿಗಳ ವಿಗ್ರಹಕ್ಕೆ ಮೊಸರನ್ನವನ್ನು ಲೇಪಿಸಿ ಒಣದ್ರಾಕ್ಷಿಯಿಂದ ಅದನ್ನು ಅಂಕರಿಸಿ ಪೂಜಿಸುವುದು ಇಲ್ಲಿ ಸಂಪ್ರದಾಯ. ಶ್ರಾವಣ ಮಾಸದಲ್ಲಿ ಭಕ್ತರು ಈ ವ್ರತಾಚರಣೆಯನ್ನು ಹೆಚ್ಚಾಗಿ ಮಾಡುತ್ತಾರೆ. ಇದನ್ನು ಬುತ್ತಿ ಪೂಜೆ ಎಂದೇ ಕರೆಯುತ್ತಾರೆ.

–ರೇಖಾನಾಯಕ ಎನ್. ಡೊಳ್ಳಿನ, ಕೊಪ್ಪಳ

